**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ8(7)/ಶಾಶಿಅ/ಅ.ರಹಿತ.ಶಾ.ಮಾನ್ಯತೆ/ನವೀ/01/2015-16 ದಿನಾಂಕ:21.10.2015

**ಸು ತ್ತೋ ಲೆ**

ವಿಷಯ: ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳ ಮಾನ್ಯತೆ ನವೀಕರಣದ ಬಗ್ಗೆ.

1. ರಾಜ್ಯದಲ್ಲಿನ ಅನುದಾನಿತ/ಅನುದಾನರಹಿತ ಪ್ರೌಢಶಾಲೆಗಳ ಪೈಕಿ 3187 ಶಾಲೆಗಳು 2015-16ನೇ ಸಾಲಿಗೆ ಮಾನ್ಯತೆ ಪಡೆಯದೆ ಸದರಿ ಶಾಲೆಗಳ ವಿದ್ಯಾರ್ಥಿಗಳನ್ನು ಶಾಲಾ ಅಭ್ಯರ್ಥಿಗಳಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕೂರಿಸಲು ಅನುಮತಿ ಕೋರುತ್ತಿರುವುದಾಗಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ವರದಿಸಿರುತ್ತಾರೆ.

2. ಈ ರೀತಿ ಮಾನ್ಯತೆ ನವೀಕರಣಕ್ಕಾಗಿ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಕ್ಲುಪ್ತ ಕಾಲದಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿನ ನಿಯಮಗಳಂತೆ ಇತ್ಯರ್ಥಪಡಿಸಲು ಮಾನ್ಯತೆ ನವೀಕರಣ ಪ್ರಾಧಿಕಾರಕ್ಕೆ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

   i) ಉಪನಿರ್ದೇಶಕರು ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಮಾನ್ಯತೆ ನವೀಕರಣಕ್ಕಾಗಿ ಸಲ್ಲಿಸಲ್ಪಟ್ಟ ಬಾಕಿ ಇರುವ ಎಲ್ಲಾ ಪ್ರಸ್ತಾವನೆಗಳನ್ನು ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮ-1987ರ ನಿಯಮಗಳಡಿಯಲ್ಲಿ 10 ದಿನಗಳ ಒಳಗೆ ಇತ್ಯರ್ಥಪಡಿಸುವುದು.

   ii) ಮಾನ್ಯತೆ ನವೀಕರಣಕ್ಕಾಗಿ ಈವರೆಗೂ ಪ್ರಸ್ತಾವನೆಯನ್ನು ಸಲ್ಲಿಸದೇ ಇರುವ ಅನುದಾನಿತ/ಅನುದಾನ ರಹಿತ ಶಾಲೆಗಳು ತುರ್ತಾಗಿ 15 ದಿನಗಳ ಒಳಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವಂತೆ ಸೂಚಿಸಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಹಂತದಿಂದ ಕ್ರಮವಹಿಸುವುದು ಮತ್ತು ಇಂತಹ ಶಾಲೆಗಳ ಪಟ್ಟಿಯನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರವರಿಗೆ ಕಳುಹಿಸತಕ್ಕದ್ದು.

   iii) ಮೇಲ್ಕಂಡ ಕ್ರಮ ಸಂಖ್ಯೆ-2ರಂತೆ ಮಾನ್ಯತೆ ನವೀಕರಣಕ್ಕಾಗಿ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಮಾನ್ಯತೆ ನವೀಕರಣ ಮಾಡುವ ಪ್ರಾಧಿಕಾರಿಗಳಾದ ಉಪನಿರ್ದೇಶಕರು ನಿಯಮಾನುಸಾರ ಪರಿಶೀಲಿಸಿ 10 ದಿನಗಳ ಒಳಗೆ ಇತ್ಯರ್ಥಪಡಿಸುವುದು. ಈ ಕುರಿತು ದಿನಾಂಕ: 30-11-2015ರೊಳಗೆ ಇತ್ಯರ್ಥಪಡಿಸಲು ಕಾಲಮಿತಿ ನಿಗದಿಪಡಿಸಿದೆ.

3. ಮೇಲ್ಕಂಡಂತೆ ಮಾನ್ಯತೆ ನವೀಕರಣ ಪ್ರಸ್ತಾವನೆಗಳ ಕಾಲಮಿತಿ ಹಂತದ ಬೆಳವಣಿಗೆ ಕುರಿತು ಎಲ್ಲಾ ಉಪನಿರ್ದೇಶಕರು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ format 1 ಮತ್ತು format 2ರಲ್ಲಿ ದಿನಾಂಕ: 02-11-2015, 16-11-2015 ಮತ್ತು 01-12-2015 ರಲ್ಲಿದ್ದಂತೆ ಪ್ರಗತಿ ವರದಿಯನ್ನು ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಎಕ್ಸೆಲ್(Excel sheet)ನಲ್ಲಿ ಇ.ಮೇಲ್ ಮೂಲಕ ತಪ್ಪದೆ ಸಲ್ಲಿಸುವುದು.

(ಇ-ಮೇಲ್ ವಿಳಾಸ: secdirector.edu.sgkar@nic.in)

21/X/15

(ಕೆ.ಎಸ್. ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1. ನಿರ್ದೇಶಕರು, ಪ್ರೌಢಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಕ.ಪ್ರೌ.ಶಿ.ಪ.ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
3. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
4. **ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.**

ಸುತ್ತೋಲೆ ಸಂಖ್ಯೆ:ಸಿ8(7)/ಶಾಶಿಅ/ಅ.ರಹಿತ.ಶಾ.ಮಾನ್ಯತೆ/ಮಾ.ನ/01/2015-16 ದಿನಾಂಕ: 21.10.2015

ನಮೂನೆ-1

**ಮಾನ್ಯತೆ ನವೀಕರಣ ಸಂಬಂಧ ಸಲ್ಲಿಕೆಯಾದ ಪ್ರಸ್ತಾವನೆಯ ವಿವರಗಳು**

| ಜಿಲ್ಲೆ | ಕ್ಷೇತ್ರ | | ವರದಿ ದಿನಾಂಕ | |
|---|---|---|---|---|

| ಕ್ರಮ ಸಂಖ್ಯೆ | ಪ್ರೌಢಶಾಲೆಯ ಹೆಸರು | ಶಾಲೆ ನಡೆಯುತ್ತಿರುವ ಸ್ಥಳ ಗ್ರಾಮ/ಪಟ್ಟಣ/ನಗರ | ಪ್ರಸ್ತಾವನೆ ಸಲ್ಲಿಕೆ ದಿನಾಂಕ ದಿನಾಂಕ/ತಿಂಗಳು/ವರ್ಷ | ಪ್ರಸ್ತಾವನೆ ಇತ್ಯರ್ಥಗೊಳಿಸಿದ ದಿನಾಂಕ. ದಿನಾಂಕ/ತಿಂಗಳು/ವರ್ಷ | ಬಾಕಿ ಉಳಿದಿದ್ದಲ್ಲಿ, ಬಾಕಿ ಉಳಿಯಲು ಕಾರಣ | ತಿರಸ್ಕರಿಸಿದ್ದಲ್ಲಿ ತಿರಸ್ಕರಿಸಿರುವುದಕ್ಕೆ ಕಾರಣ |
|---|---|---|---|---|---|---|
| | | | | | | |

ನಮೂನೆ-2

ಪ್ರೌಢಶಾಲೆಗಳ ಮಾನ್ಯತೆ ನವೀಕರಣ ಸಂಬಂಧ ಸಲ್ಲಿಕೆಯಾದ ಅರ್ಜಿಗಳ ವಿವರಗಳು

| | | | |
|---|---|---|---|
| ಜಿಲ್ಲೆ | ಕ್ಷೇತ್ರ | | ವರದಿ ದಿನಾಂಕ: |

| | | |
|---|---|---|
| 1. | 2015-16ನೇ ಸಾಲಿಗೆ ಸಲ್ಲಿಕೆಯಾದ ಪ್ರಸ್ತಾವನೆಗಳ ಸಂಖ್ಯೆ. | |
| 2. | ಅನುಮೋದಿಸಿದ ಒಟ್ಟು ಪ್ರಸ್ತಾವನೆಗಳ ಸಂಖ್ಯೆ | |
| 3. | ತಿರಸ್ಕರಿಸಲ್ಪಟ್ಟ ಒಟ್ಟು ಪ್ರಸ್ತಾವನೆಗಳ ಸಂಖ್ಯೆ. | |
| 4. | 2015-19ನೇ ಸಾಲಿಗೆ ಸಲ್ಲಿಕೆಯಾದ ಪ್ರಸ್ತಾವನೆಗಳ ಸಂಖ್ಯೆ. | |
| 5. | ವರದಿ ಸಲ್ಲಿಸುವ ದಿನಾಂಕಕ್ಕೆ ಬಾಕಿ ಇರುವ ಪ್ರಸ್ತಾವನೆಗಳ ಸಂಖ್ಯೆ. | |
| (1) | 10 ದಿನಗಳಿಗಿಂತ ಕಡಿಮೆ | |
| (11) | 10 ದಿನಕ್ಕೆ ಮೇಲ್ಪಟ್ಟು ಒಂದು ತಿಂಗಳ ಒಳಗೆ | |
| (111) | ಒಂದು ತಿಂಗಳಿಗೆ ಮೇಲ್ಪಟ್ಟು ಮೂರು ತಿಂಗಳ ಒಳಗೆ | |
| (1v) | ಮೂರು ತಿಂಗಳಿಗೂ ಮೇಲ್ಪಟ್ಟು | |